UASB LIBRARY
Newspaper Clippings
Pg .1 Wednesday 03-02-2021 Jai Kisan



ಕುರಿ ಪರಿಹಾರ ಅನುಗ್ರಹ ಯೋಜನೆ ಸ್ಥಗಿತಕ್ಕೆ ಆಕ್ಷೇಪ

ಮುಖ್ಯಮಂತ್ರಿ ಯಡಿಯೂರಪ್ಪ ಜತೆ ಚರ್ಚಿಸಿ ಅಗತ್ಯ ಕ್ರಮ: ಪಶುಸಂಗೋಪನಾ ಸಚಿವ ಚವ್ಹಾಣ್

ವಿಧಾನಸಭೆ: ಹಿಂದಿನ ಸರ್ಕಾರದ ಅವಧಿಯಲ್ಲಿ ಪ್ರಾರಂಭವಾದ, ಮೃತಪಟ್ಟ ಕುರಿ-ಮೇಕೆಗಳಿಗೆ ಪರಿಹಾರ ಒದಗಿಸುವ ಅನುಗ್ರಹ ಯೋಜನೆ ಸ್ಥಗಿತಗೊಳಿಸಿರುವ ಬಗ್ಗೆ ಮೂರೂ ಪಕ್ಷಗಳ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಭರವಸೆ ನೀಡಿದ್ದಾರೆ.



ಮಂಗಳವಾರ ವಿಷಯ ಪ್ರಸ್ತಾಪಿಸಿದ ಬಿಜೆಪಿ ಸದಸ್ಯೆ ಕೆ. ಪೂರ್ಣಿಮಾ ಶ್ರೀನಿವಾಸ್, 2013ರ ಜಾನುವಾರು ಗಣತಿ ಪ್ರಕಾರ ರಾಜ್ಯದಲ್ಲಿ 72 ಲಕ್ಷ ಜಾನುವಾರುಗಳಿವೆ. ಹಿಂದಿನ ಸರ್ಕಾರದಲ್ಲಿ ಕುರಿ ಆಥವಾ ಮೇಕೆ ಸತ್ತರೆ 5 ಸಾವಿರ ರು. ಪರಿಹಾರ ನೀಡುವ 'ಅನುಗ್ರಹ' ಕಾರ್ಯಕ್ರಮ ರೂಪಿಸಿ ಅನುಷ್ಠಾನ ಗೊಳಿಸಲಾಗಿತ್ತು. 2015ರಲ್ಲಿ ನಿಯಮ ಬದಲಿಸಿ 6 ತಿಂಗಳ ಮೇಲಿನ ಕುರಿಗಳಿಗೆ 5 ಸಾವಿರ ರು. ಹಾಗೂ ಅದಕ್ಕಿಂತ ಕಡಿಮೆ ತಿಂಗಳ ಕುರಿಗೆ 2,500 ರು. ಪರಿಹಾರ ನೀಡಲಾಗುತ್ತಿತ್ತು. ಈವರೆಗೆ 88 ಕೋಟಿ ರು. ಪರಿಹಾರ ನೀಡಿದ್ದು, 39.80 ಕೋಟಿ ರು. ಪಾವತಿ ಇನ್ನೂ ಬಾಕಿ ಉಳಿದಿದೆ. ಚಿತ್ರದುರ್ಗ ಜಿಲ್ಲೆ ಒಂದರಲ್ಲೇ 1.40 ಲಕ್ಷ ಫಲಾನುಭವಿಗಳಿಗೆ ಯೋಜನೆ ಹಣ ತಲುಪಿಲ್ಲ. ಇದರ ನಡುವೆ ಹೊಸ ಅರ್ಜಿ ಪಡೆಯುತ್ತಿಲ್ಲ ಎಂದರು.

ಈ ವೇಳೆ ಮಾತನಾಡಿದ ಸಚಿವ ಪ್ರಭು ಚವ್ಹಾಣ್, 39.80 ಕೋಟಿ ರು. ಬಾಕಿ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು ಎಂದರು. ಕಾಂಗ್ರೆಸ್ ಸದಸ್ಯ ಕೆ.ಆರ್. ರಮೇಶ್ ಕುಮಾರ್, 'ಮೃತಪಟ್ಟ ಕುರಿಗೆ ಪರಿಹಾರಕ್ಕೆ ಅರ್ಜಿ ಸಲ್ಲಿಸಲು ಕಳೆದ ಒಂದೂವರೆ ವರ್ಷದಿಂದ ಹೊಸ ಅರ್ಜಿ ಪಡೆಯುತ್ತಿಲ್ಲ' ಎಂದು ಆರೋಪಿಸಿದರು.

For more information visit
University Library Website
Web - uasbagrilibindia.org
E-mail- librarian@uasbangalore.edu.in

03-02-2021 Kp Pg 09

03 Feb 2021

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ (ಎಐಡಿಸಿ)ನ್ನು ವಿಧಿಸಲಾಗಿದೆ. ಆದರೆ, ಈ ಸೆಸ್ ಕೃಷಿ ಮೂಲಸೌಕರ್ಯ ಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸೆಸ್ ವಿಧಿಸಲಾಗಿದೆ. ಆದರೂ, ರೈತರ ಮೇಲಿನ ಸೆಸ್‌ನಿಂದ ಗ್ರಾಹಕರ ಮೇಲೆ ಯಾವುದೇ ರೀತಿಯ ಹೊರೆಯಾಗದು. ಬದಲಿಗೆ ಕೃಷಿ ವಲಯಕ್ಕೆ ಸಹಾಯಕವಾಗಲಿದೆ ಎಂದು ಬಜೆಟ್ ಮಂಡನೆ ವೇಳೆ ಹಣಕಾಸು ಸಚಿವರು ಸ್ಪಷ್ಟಪಡಿಸಿದ್ದಾರೆ.

ಕೃಷಿ ಸೆಸ್ ಗ್ರಾಹಕರಿಗಾಗದು ಭಾರ



ಒಟ್ಟಾರೆ ಅಬಕಾರಿ ಸುಂಕವೂ ಕಡಿಮೆ

ಅದೇ ರೀತಿ, ಡೀಸೆಲ್ ಮೇಲಿನ ಮೂಲ ಅಬಕಾರಿ ಸುಂಕವನ್ನು 4.83 ರೂ.ಗಳಿಂದ 1.8 ರೂ.ಗಳಿಗೆ ಕಡಿತ ಗೊಳಿಸಲಾಗಿದೆ. ಜಾಗತಿಕ ವಿದೇಶ ಹೆಚ್ಚುವರಿ ಅಬಕಾರಿ ಸುಂಕವನ್ನು ಪ್ರತಿ ಲೀಟರ್ ತೈಲದ ಮೇಲೆ 9 ರೂ.ಗಳಿಂದ 8 ರೂ.ಗಳಿಗೆ ಇಳಿಸಲಾಗಿದೆ. ಹೀಗಾಗಿ ಇನ್ನು ಪ್ರತಿ ಲೀಟರ್‌ಗೆ ಪೆಟ್ರೋಲ್ ಮೇಲಿನ ಒಟ್ಟಾರೆ ಅಬಕಾರಿ ಸುಂಕವು (ಬಿಎಡಿ, ಎಸ್‌ಎಐಡಿ, ಎಐಡಿಸಿ) 14.9 ರೂ.ಗಳಾಗಲಿದೆ.



ಎಐಡಿಸಿ ಗ್ರಾಹಕರಿಗೆ ಹೊರೆಯಾಗದು

ಕೇಂದ್ರ ಬಜೆಟ್‌ನಲ್ಲಿ ಕೃಷಿ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸೆಸ್ ವಿಧಿಸಲಾಗಿದೆ. ಆದರಂತೆ, ಪ್ರತಿ ಲೀಟರ್ ಪೆಟ್ರೋಲ್ ಮೇಲೆ 1.5 ರೂ. ಮತ್ತು ಪ್ರತಿ ಲೀಟರ್ ಡೀಸೆಲ್ ಮೇಲೆ 4 ರೂ.ಗಳ ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್(ಎಐಡಿಸಿ)ನ್ನು ಹಾಕಲಾಗಿದೆ. ಆದರೆ, ಇದರಿಂದ ಗ್ರಾಹಕರ ಮೇಲೆ ಯಾವುದೇ ರೀತಿಯಲ್ಲಿಯೂ ಹೆಚ್ಚಿನ ಹೊರೆಯಾಗದು ಎನ್ನುವುದು ಗಮನಾರ್ಹ.

ಬೆಲೆಯಲ್ಲಿ ಸಮನ್ವಯ ಸಾಧಿಸುವ ಉದ್ದೇಶ

ಆದರೆ, ಈ ಹಿಂದೆ ಈ ಸುಂಕವು 14.98 ರೂ.ಗಳಷ್ಟಿತ್ತು. ಅದೇ ರೀತಿ ಪ್ರತಿ ಲೀಟರ್ ಡೀಸೆಲ್ ಮೇಲಿನ ಸುಂಕವು ಈಗ 13.8 ರೂ.ಗಳದ್ದರೆ ಇದಕ್ಕೂ ಮೊದಲು 13.83 ರೂ.ಗಳಿತ್ತು. ಹೀಗಾಗಿ ಈ ಸುಂಕವನ್ನು ಕಡಿತಗೊಳಿಸುವ ಮೂಲಕ ಬೆಲೆಯಲ್ಲಿ ಸಮನ್ವಯ ಸಾಧಿಸುವ ಉದ್ದೇಶವನ್ನು ಹೊಂದಿರುವ ಬಗ್ಗೆ ಬಜೆಟ್ ಬೆಳಕು ಚೆಲ್ಲಿದೆ.

ಮೂಲ ಅಬಕಾರಿ ಸುಂಕ ದರ ಇಳಿಕೆ

ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಎಐಡಿಸಿಯನ್ನು ವಿಧಿಸುವುದಕ್ಕೂ ಮೊದಲು ಮೂಲ ಅಬಕಾರಿ ಸುಂಕ ಮತ್ತು ವಿಶೇಷ ಹೆಚ್ಚುವರಿ



ಅಬಕಾರಿ ಸುಂಕದ ದರವನ್ನು ಕಡಿಮೆ ಮಾಡಲಾಗಿದೆ. ಜಾಗತಿ, ಗ್ರಾಹಕರಿಗೆ ಸೆಸ್ ಹೊರೆಯಾಗಿ ಪರಿಣಮಿಸದು. ಏಕೆಂದರೆ, ಈ ಹಿಂದೆ ಪ್ರತಿ ಲೀಟರ್ ಪೆಟ್ರೋಲ್‌ಗೆ 2.98 ರೂ.ಗಳ ಮೂಲ ಅಬಕಾರಿ ಸುಂಕ (ಬಿಇಡಿ) ಹಾಗೂ ಪ್ರತಿ ಲೀಟರ್ ಮೇಲೆ 12 ರೂ.ಗಳ ವಿಶೇಷ ಹೆಚ್ಚುವರಿ ಅಬಕಾರಿ ಸುಂಕ (ಎಸ್‌ಎಐಡಿ)ಯನ್ನು ವಿಧಿಸಲಾಗುತ್ತಿತ್ತು. ಆದರೆ, ಈ ಸುಂಕಗಳನ್ನು ಈಗ ಕ್ರಮವಾಗಿ 1.4 ರೂ. ಮತ್ತು 11 ರೂ.ಗಳಿಗೆ ಇಳಿಸಲಾಗಿದೆ.

ಮದ್ಯದ ಮೇಲಿನ ತೆರಿಗೆ ಮರು ಹೊಂದಾಣಿಕೆ



ಇದೇ ರೀತಿ ಮದ್ಯಪಾನ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಸಹ ಮರು ಹೊಂದಾಣಿ ಮಾಡಲಾಗಿದೆ. ಬಜೆಟ್‌ನಲ್ಲಿ ಎಐಡಿಸಿಗೆ ಕೇ. 100ರ ಸುಂಕವನ್ನು ಪ್ರಸ್ತಾಪಿಸಲಾಗಿದೆ. ಅದರಂತೆ, ಮದ್ಯ ಪಾನ ಉತ್ಪನ್ನಗಳ ಮೇಲೆ ಇನ್ನು ಮುಂದೆ ಕೇ. 150 ರಷ್ಟು ಮೂಲ ಗ್ರಾಹಕ ಸುಂಕವಿರಲಿದೆ. ಮೂಲ ಆಮದು ಸುಂಕವು ಕೇ. 50 ಕ್ಕೆ ಕಡಿತಗೊಳಿಸಲಾಗಿದೆ. ಹೀಗಾಗಿ ಒಟ್ಟಾರೆ ಗ್ರಾಹಕ ಯಾವುದೇ ಬಗೆಯ ಹೆಚ್ಚುವರಿಯನ್ನು ಪಾವತಿಸಬೇಕಲ್ಲದಿರುವುದರಿಂದ ಕೊಂಚವೂ ಹೊರೆಯಾಗಿ ಪರಿಣಮಿಸದು.

03-02-2021 Hd Pg 04

57 ಸಾವಿರ ರೈತರ ಕೃಷಿ ಸಾಲ ಮನ್ನಾಗೆ ಪ್ರಕ್ರಿಯೆ

ಶೂನ್ಯ ಸಾಲದ ಮಿತಿ ಹೆಚ್ಚಳಕ್ಕೆ ಪರಿಶೀಲನೆ: ಎಸ್‌ಟಿಎಸ್

ವಿಧಾನ ಪರಿಷತ್: ರೈತರ ಸಾಲ ಮನ್ನಾ ಯೋಜನೆಯಡಿ ಈವರೆಗೆ ಬಾಕಿ ಉಳಿದಿರುವ 57 ಸಾವಿರ ಅರ್ಜಿಗಳ ಸಂಬಂಧ 295 ಕೋಟಿ ರು.ಗಳನ್ನು ಬಿಡುಗಡೆ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.



ಕಾಂಗ್ರೆಸ್‌ನ ಆರ್. ಧರ್ಮಸೇನಾ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸಾಲ ಮನ್ನಾ ಯೋಜನೆಯಡಿ ಬಂದ ಅರ್ಜಿಗಳನ್ನು ಇತ್ಯರ್ಥ ಮಾಡಲಾಗುತ್ತಿದೆ. ಪ್ರಸ್ತುತ 3 ಲಕ್ಷ ರು.ವರೆಗೆ ಇರುವ ಶೂನ್ಯ ಬಡ್ಡಿ ದರದ ಸಾಲದ ಮಿತಿಯನ್ನು ಹೆಚ್ಚಿಸಲು ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಪ್ರತಿಪಕ್ಷದ ನಾಯಕ ಎಸ್.ಆರ್. ಪಾಟೀಲ್ ಮಾತನಾಡಿ, ರಾಜ್ಯಾದ್ಯಂತ ತಾವು ಎಲ್ಲಿಗೆ ಹೋದರೂ ಸಾಲ ಮನ್ನಾ ಆಗಿಲ್ಲ ಎಂಬ ದೂರುಗಳು ಕೇಳಿ ಬರುತ್ತಿವೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಯಲ್ಲಾಪುರದಲ್ಲಿ ಅವ್ಯವಹಾರ ಆಗಿಲ್ಲ: ಕಾರವಾರ ಜಿಲ್ಲೆ ಯಲ್ಲಾಪುರ ತಾಲೂಕಿನಲ್ಲಿ ಬುಡಕಟ್ಟು ಜನಾಂಗದ ಆರ್ಥಿಕ ಪುನಶ್ಚೇತನಕ್ಕಾಗಿ ಆರಂಭವಾದ ಸಹ್ಯಾದ್ರಿ ಗಿರಿಜನ ಲ್ಯಾಂಪ್ಸ್ ಸೊಸೈಟಿಯ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಎಸ್.ಟಿ. ಸೋಮಶೇಖರ್ ತಿಳಿಸಿದರು. ಕಾಂಗ್ರೆಸ್ ಶಾಸಕ ಶ್ರೀಕಾಂತ್ ಲಕ್ಷ್ಮಣ ಘೋಟ್ನೇಕರ್ ಪ್ರಶ್ನೆಗೆ ಉತ್ತರಿಸಿದ ಸಚಿವರು ಈ ಬಗ್ಗೆ ಸಷ್ಟನೆ ನೀಡಿದರು.

03-02-2021 Kp Pg 09

03 Feb 2021

ಬೇಸಿಗೆ ಆರಂಭಕ್ಕೆ ಮುನ್ನವೇ ಮಾರುಕಟ್ಟೆಗೆ ಕಲ್ಲಂಗಡಿ | ರಸ್ತೆ ಬದಿಯಲ್ಲಿ ವ್ಯಾಪಾರ ಶುರು

ಬೇಸಿಗೆ ದಣಿವಾರಿಸಲು ಲಗ್ಗೆಯಿಟ್ಟ ಕಲ್ಲಂಗಡಿ

*ಟಿ.ನಾಗರಾಜ್

ತಾವರೆಕೆರೆ: ಗ್ರಾಮಾಂತರ ಪ್ರದೇಶದಲ್ಲಿ ಚಳಿ ಕಡಿಮೆಯಾಗಿ, ಬಿಸಿಲಿನ ಬೇಗೆ ಹೆಚ್ಚಾಗುತ್ತಿದ್ದಂತೆ ಪಟ್ಟಣಕ್ಕೆ ಕಲ್ಲಂಗಡಿ ಹಣ್ಣು ಲಗ್ಗೆ ಇಟ್ಟಿದ್ದು ರಸ್ತೆ ಬದಿಗಳೆಲ್ಲಾ ಈಗ ಎಲ್ಲೆಡೆ ಗ್ರಾಹಕರು ಬಿಸಿಲಿನ ಬೇಗೆಯಿಂದ ದಣಿವಾರಿಸಿಕೊಳ್ಳಲು ಕಲ್ಲಂಗಡಿ ಹಣ್ಣಿನ ಮೊರೆ ಹೋಗುತ್ತಿದ್ದಾರೆ.

ವರ್ಷದಿಂದ ವರ್ಷಕ್ಕೆ ಮಳೆ ಪ್ರಮಾಣ ಕಡಿಮೆಯಾಗಿದ್ದರಿಂದ ಈಗ ನಿಗಿ ನಿಗಿ ಬಿಸಿಲು ಎಷ್ಟೇ ನೀರು ಕುಡಿದರೂ ದಾಹ ನೀಗುವುದೇ ಇಲ್ಲ, ತಂಪು ಪಾನೀಯ ಸೇವಿಸಿದರೂ ಗಂಟಲು ಬಿಗಗೀಮು ಕಡಿಮೆಯಾಗಲ್ಲ, ಬಿಸಿಲಿನ ಬೇಗೆಯಿಂದ ಪಾರಾಗಲು ಜನ ತಂಪು ಪಾನೀಯದ ಜೊತೆಗೆ ಕಲ್ಲಂಗಡಿ ಹಣ್ಣು ಹಾಗೂ ಎಳನೀರಿನ ಮೊರೆ ಹೋಗುತ್ತಿದ್ದಾರೆ. ಕಳೆದ ವಾರದಿಂದ ಪಟ್ಟಣದಲ್ಲಿ ಬಿಸಿಲು ಹೆಚ್ಚಾಗುತ್ತಿದ್ದು, ತಂಪು ಪಾನೀಯ, ಎಳನೀರು, ಕಲ್ಲಂಗಡಿ ಹಣ್ಣು ಖರೀದಿಗೆ ಜನರು ಮುಗಿಬಿದ್ದಿದ್ದಾರೆ. ಈ ನಿಟ್ಟಿನಲ್ಲಿ ಬೇಸಿಗೆಗೂ ಮುನ್ನವೇ ಲೋಡುಗಟ್ಟಲೆ ಕಲ್ಲಂಗಡಿ ಹಣ್ಣು ಪಟ್ಟಣಕ್ಕೆ ಬಂದಿಳಿದಿದೆ.

ಆರೋಗ್ಯದಾಯಕ ಕಲ್ಲಂಗಡಿ: ಕಲ್ಲಂಗಡಿ ಹಣ್ಣು ಆರೋಗ್ಯಕ್ಕೆ ಉತ್ತಮವಾಗಿದ್ದು, ದಾಹತಣಿಸಲು ಮತ್ತು ಸೌಂದರ್ಯಕ್ಕೂ ಸಪಕಾರಿಯಾಗುತ್ತದೆ. ಜನತೆಗೆ ಕಲ್ಲಂಗಡಿ ಹಣ್ಣನಲ್ಲಿ ಶೇ.92 ನೀರಿನಂಶವಿದ್ದು ಹೆಚ್ಚು ರೋಗನಿರೋಧಕ ಶಕ್ತಿಯನ್ನು ಹೊಂದಿದೆ. ಇದರ ಸೇವನೆಯಿಂದ ರಕ್ತದೊತ್ತಡ ಕಡಿಮೆಯಾಗುತ್ತದೆ. ಮೂಳೆ, ಸ್ನಾಯುಗಳು ಬಲಗೊಳ್ಳುತ್ತದೆ. ಕಿಡ್ನಿ, ಕಣ್ಣನ್ನು ಆರೋಗ್ಯವಾಗಿಡುತ್ತದೆ. ಹೀಗೆ ಅದರ ಆರೋಗ್ಯಕಾರಿ ಅಂಶಗಳ ಬಗ್ಗೆ ಹೇಳುತ್ತಾ ಹೋದರೆ ಪಟ್ಟಿಯೇ ಬೆಳೆಯುತ್ತದೆ.

- ಬಿಸಿಲ ಬೇಗೆಯ ದಣಿವಾರಿಸಲು ಬಂದಿದೆ ಕಲ್ಲಂಗಡಿ
- ಕಲ್ಲಂಗಡಿ ಜೊತೆಗೆ ಎಳನೀರಿಗೂ ಹೆಚ್ಚಿದ ಬೇಡಿಕೆ
- ಆರೋಗ್ಯ ಮತ್ತು ಸೌಂದರ್ಯವರ್ಧಕವಾಗಿಯೂ ಕಲ್ಲಂಗಡಿ ಬಳಕೆ

ಸೇವನೆಯಿಂದ ಅನೇಕ ಉಪಯೋಗವಿರುವುದರಿಂದ ಕಲ್ಲಂಗಡಿ ಹಣ್ಣನ್ನು ಹೆಚ್ಚು ಮಂದಿ ಬಳಸುತ್ತಾರೆ.

ಕಡಿಮೆ ದರದಲ್ಲಿ ಕಲ್ಲಂಗಡಿ ಲಭ್ಯ: ಈಗಾಗಲೇ ಹಲವಾರು ಸ್ಥಳಗಳಲ್ಲಿ ಕಲ್ಲಂಗಡಿ ಹಣ್ಣುಗಳನ್ನು ರಾಶಿ ಹಾಕಿಕೊಂಡು ಮಾರಾಟ ನಡೆಸುತ್ತಿದ್ದು ಜನರು ಅದರ ಖರೀದಿಗೆ ಮುಗಿಬಿದ್ದಿದ್ದಾರೆ. ಸಾಮಾನ್ಯವಾಗಿ 1 ಕೆ.ಜಿ ಹಣ್ಣಿನ ಬೆಲೆ 15 ರಿಂದ 20 ರೂ. ಇದ್ದು ಸುಲಭವಾಗಿ ಎಲ್ಲರಿಗೂ ಲಭ್ಯವಾಗುವ ದರದಲ್ಲಿ ಮಾರಾಟವಾಗುತ್ತಿದೆ. ತಂಪು ಪಾನೀಯಗಳಿಗಿಂತ ಬಿಸಿಲಿನ ತಾಪದಿಂದ ಆರೋಗ್ಯ ರಕ್ಷಣೆಗೆ ಎಳನೀರು ಮತ್ತು ಕಲ್ಲಂಗಡಿ ಉತ್ತಮ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.



"ಅಗತ್ಯಕ್ಕೆ ತಕ್ಕಂತೆ, ಬಿಸಿಲು ಹೆಚ್ಚಾದಂತೆ ದಿನ ದಿಂದ ದಿನಕ್ಕೆ ಕಲ್ಲಂಗಡಿ ಹಣ್ಣಿನ ವ್ಯಾಪಾರ ಜೋರಾಗುತ್ತಿದೆ. ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರೂ ಸಹ ಬಾಯಿ ಚಪ್ಪರಿಸಿ ತಿನ್ನುತ್ತಾರೆ. ಒಂದು ಪ್ಲೇಟ್‌ಗೆ 10 ರೂ. ದರವಿದ್ದು ಪ್ರತಿ ದಿನ 2 ರಿಂದ 3 ಸಾವಿರ ರೂ. ವ್ಯಾಪಾರ ವಾಗುತ್ತಿದೆ. ಜನರು ಹಣಕ್ಕಿಂತ ಹಣ್ಣಿನ ರುಚಿಗೆ ಹೆಚ್ಚಿನ ಗಮನ ಹರಿಸುತ್ತಾರೆ. ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಉತ್ತಮವಾದ ಹಣ್ಣುಗಳನ್ನು ತಂದು ಮಾರಾಟ ಮಾಡಲಾಗುತ್ತಿದೆ.
■ ಅಬ್ದುಲ್, ಕಲ್ಲಂಗಡಿ ವ್ಯಾಪಾರಿ.

03-02-2021 Hd Pg 09

UASB LIBRARY
Newspaper Clippings



Pg .2 Wednesday 03-02-2021 **Jai Kisan**



ಹಾಸನದ ಮಹೇಶ್ ದೇವಪ್ಪ ಸಾಧನೆಯ ಕತೆ

ರುಚಿಕಟ್ಟು ಮಸಾಲೆ ಉತ್ಪನ್ನ ಕೊಟ್ಟು ಮನೆಮಾತಾದ ಮೈಲಾರಿ

asianet ಸುವರ್ಣ ನ್ಯೂಸ್ ಕನ್ನಡಪ್ರಭ Karnataka Business Awards

ಕರ್ನಾಟಕದಲ್ಲಿ ಸಣ್ಣದಾಗಿ ಉದ್ಯಮವನ್ನು ಆರಂಭಿಸಿ ಸತತ ಪ್ರಯತ್ನ ಮಾಡಿ ಆ ಉದ್ಯಮವನ್ನು ಗಟ್ಟಿಗಿಸಿ ನೂರಾರು ಮಂದಿಗೆ ಕೆಲಸ ಕೊಟ್ಟು ಪರೋಕ್ಷವಾಗಿ ನಾಡಿನ ಅಭಿವೃದ್ಧಿಗೆ ಕಾರಣಕರ್ತರಾಗಿರುವ ಉದ್ಯಮಿಗಳಿದ್ದಾರೆ. ಅವರಲ್ಲಿ ಕೆಲವು ಸಾಧಕರನ್ನು ಆರಿಸಿ ಆ ಸಾಧನೆಯನ್ನು ಗೌರವಿಸಲು **ಸುವರ್ಣ ನ್ಯೂಸ್** ಮತ್ತು **ಕನ್ನಡಪ್ರಭ** ಕರ್ನಾಟಕ ಬಿಸಿನೆಸ್ ಅವಾರ್ಡ್ ಪ್ರಶಸ್ತಿ ನೀಡುತ್ತಿದೆ. ಈ ಸಾಲಿನ ಕರ್ನಾಟಕ ಬಿಸಿನೆಸ್ ಅವಾರ್ಡ್ಸ್ ಪುರಸ್ಕೃತ **ಮೈಲಾರಿ ಮಸಾಲ** ಸಂಸ್ಥೆಯ ಗೆಲುವಿನ ಕತೆ ಇಲ್ಲಿದೆ.



ಜನರ ಪ್ರೋತ್ಸಾಹವೇ ನನ್ನ ಶಕ್ತಿ. ಸಣ್ಣದಾಗಿ ಆರಂಭಿಸಿದ ಉದ್ಯಮವನ್ನು ಇಂದು ಬೆಳೆದಿದ್ದಾರೆ. ಇನ್ನಷ್ಟು ರುಚಿಕಟ್ಟು ಮಸಾಲ ಉತ್ಪನ್ನ ಒದಗಿಸುವಷ್ಟು ಸ್ಥಾನಿ ನೀಡಿದ್ದಾರೆ. ಶೃ ಹಿಡಿದು ನಡೆದಿರುವಿಗೆ ಧನ್ಯವಾದ.
• ಮಹೇಶ್ ದೇವಪ್ಪ



ಹಾಸನದ ಮಹೇಶ್ ದೇವಪ್ಪ ಮತ್ತು ಸಂಗೀತಾ ದಂಪತಿಗೆ ಚಿನ್ಮಯಿ ಚಿನ್ಮಯಾನಂದ್ ಎಂಬ ಒಂದು ಬಚ್ಚೆ ಅಂಗಡಿ ಇತ್ತು. ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತು. ಸಂಗೀತಾ ಅವರಿಗೆ ಆಡುಗೆಯಲ್ಲಿ ಖಂಡಾ ಆಸಕ್ತಿ. ಅಷ್ಟೇ ಅಲ್ಲ, ಅವರು ಮಾಡಿದ್ದನ್ನು ಸವಿದವರೂ ಅದನ್ನು ಮೆಚ್ಚಿಕೊಳ್ಳುತ್ತಿದ್ದರು. ಹಾಗಾಗಿ ಮನೆಯಲ್ಲೇ ಮಸಾಲೆ ತಯಾರಿಸಿ ಸರಬರಾಜು ಮಾಡಿ ಬಿಟ್ಟರೆ ಆಗಬಹುದಲ್ಲ ಅನ್ನಿಸಿತು. ಅದನ್ನು ಅಲ್ಲಿಗೆ ಒಂದೆ ಮಹೇಶರು ಬಳಸಿಕೊಳ್ಳಲಿಲ್ಲ. ಬೇರೆಕಡೆ ಜಾಸ್ತಿಯಾದರೆಲ್ಲಾ ಓಸ್ ಫೈನ್ ಡೇ ಒಬ್ಬ ಸ್ಟೈಲಿಸ್ಟರು ಬಂದು ಮಹೇಶ್ ಅವರಿಬ್ಬರಿಗೆ ನಿಲ್ಲಿಸಿ ಫೋಟೊ ತೆಗೆದುಕೊಂಡು ಮಸಾಲ ಉತ್ಪನ್ನ ಕಂಪನಿಗೆ ಮಾಲ್